ವಾರದ ಪತ್ರ

## ಸುದ್ದಿ ವಾಹಿನಿಗಳಲ್ಲಿ ಕನ್ನಡ! ಹೋರಾಟ ಮಾಡಬೇಕೆ?

ಕಮಿಂಗ್ ಅಪ್, ಕಮಿಂಗ್ ನೆಕ್ಸ್ಟ್, ಪ್ರೈಮ್ ಟೈಮ್, ಡೋಂಟ್ ಮಿಸ್, ಬ್ರೇಕಿಂಗ್ ನ್ಯೂಸ್, ನ್ಯೂಸ್ ಲೈವ್, ಥರ್ಟಿ ಮಿನಿಟ್ಸ್, ಥರ್ಟಿ ನ್ಯೂಸ್, ನ್ಯೂಸ್ ಅಪ್‌ಡೇಟ್, ಟಾಪ್ 50, ಜಸ್ಟ್ ನೌ, ಲೈವ್, ಬ್ರೇಕಿಂಗ್, ಲಂಚ್ ಬ್ರೇಕ್, ಹೆಡ್ ಲೈನ್ಸ್, ಫಾಸ್ಟ್–50, ನ್ಯೂಸ್ ಫಸ್ಟ್, ಬ್ರೇಕಿಂಗ್, ನ್ಯೂಸ್ ಬ್ರೇಕಿಂಗ್, ಬಿಗ್ ಎಕ್ಸ್‌ಕ್ಲೂಸಿವ್, ಬ್ರೇಕ್‌ಫಾಸ್ಟ್ ಶೋ, ಸ್ಪೆಷಲ್ ರಿಪೋರ್ಟ್, ಬಿಗ್ ನ್ಯೂಸ್, ಸೂಪರ್‌ಫಾಸ್ಟ್, ಬ್ಯಾಕ್ ಇನ್, ಅಪ್‌ಡೇಟ್ ಬುಲೆಟಿನ್, ಪಬ್ಲಿಕ್ ನ್ಯೂಸ್, ಎಕ್ಸ್‌ಪ್ರೆಸ್–50, ಬಿಗ್ ಬುಲೆಟಿನ್ ಇವು ಕನ್ನಡದ ಸುದ್ದಿ ವಾಹಿನಿಗಳು ಬಳಸುವ ಪದ ಪುಂಜಗಳು. ಈ ಶಬ್ದಗಳಿಗೆ ಕನ್ನಡದಲ್ಲಿ ಸಮಾನ ಪದಗಳಿಲ್ಲವೇ? ಆಡಳಿತದಲ್ಲಿ ಹಾಗೂ ನಾಮಫಲಕಗಳಲ್ಲಿ ಕನ್ನಡಕ್ಕೆ ಹೋರಾಟ ಮಾಡಿದಂತೆ 'ಸುದ್ದಿ ವಾಹಿನಿಗಳಲ್ಲಿ ಕನ್ನಡ' ಎಂದೂ ಹೋರಾಟ ಮಾಡಬೇಕೇನೋ?

—ರಮಾನಂದ ಶರ್ಮಾ, ನವದೆಹಲಿ

## ಪುಟ್ಟಕ್ಕನ ಸೊಗಸು ಕೆಡದಿರಲಿ



ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಕಥೆಯಲ್ಲಿ ಸಹನಾ ಸಾವಿಗೀಡಾಗಿದ್ದಾಳೆ. ಆ ಸಂದರ್ಭದಲ್ಲಿ ಅವಳ ತಾಯಿ ಪುಟ್ಟಕ್ಕನ ಗೋಳಾಟ ಮುಗಿಲು ಮುಟ್ಟುತ್ತದೆ. ಅವಳ ನೋವಿನ ಆಕ್ರಂದನ ವೀಕ್ಷಕರ ಮನಸ್ಸನ್ನು ಕರಗಿಸುತ್ತದೆ. ಇಂಥ ಘೋರ ಸನ್ನಿವೇಶ ನೋಡುವುದು ಕಷ್ಟ. ಪುಟ್ಟಕ್ಕನಾಗಿ ಉಮಾಶ್ರೀ ಅವರ ಪಾತ್ರ ನಿರ್ವಹಣೆ ಸೊಗಸಾಗಿದೆ.

—ಎಸ್.ಆರ್. ಚಿಕ್ಕಣ್ಣ, ಬೆಂಗಳೂರು

## ನೀಚತನವೇ ಕಥೆಯಾದರೆ ಹೇಗೆ?

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಧಾರಾವಾಹಿಯಲ್ಲಿನ ಕೆಲವು ಘಟನೆಗಳು ನೀಚತನದ ಪರಮಾವಧಿಯಂತಿವೆ. ಆಸ್ತಿ, ಅಂತಸ್ತಿಗಾಗಿ ಜಗನ್ನಾಥ್ ಮತ್ತು ಸಂಧ್ಯಾ, ದತ್ತ ಸತ್ತಿದ್ದಾರೆ ಎಂಬ ನಕಲಿ ದಾಖಲೆ ಪಡೆಯಲು ಯಾವುದೋ ಹೆಣದ ಅಂತ್ಯಸಂಸ್ಕಾರ ಮಾಡಿಸುವುದು ಅಸಹ್ಯ.

ಆಸ್ತಿಗಾಗಿ ಯಾವ ಮಟ್ಟಕ್ಕಾದರೂ ಇಳಿಯುತ್ತೇನೆ ಎನ್ನುವ ಜನಾರ್ದನ್ ದೊಡ್ಡ ಮಗಳಿಗಾಗಿ ಹೆಂಡತಿಗೆ ಸುಳ್ಳು ಹೇಳುವುದು, ಕಿರಿಯ ಮಗಳ ಜೊತೆ ನಾಟಕವಾಡುವುದು ಇನ್ನೊಂದು ನೀಚತನ. ಆ ಕಿರಿಯ ಮಗಳೋ ತನ್ನ ಓರಗಿತ್ತಿ ಮೇಲೆ ದ್ವೇಷ ಕಾರುವುದು, ಅನಾಥೆ ಎಂದು ಸದಾ ಛೇಡಿಸುವುದು ಎಷ್ಟು ಸರಿ? ಆಸ್ತಿ, ದೌಲತ್ತಿಗಾಗಿ ಖಳನಾಯಕಿ ಶಾರ್ವರಿ ತನ್ನ ಗಂಡನಿಗೇ ಭಯ ಹುಟ್ಟಿಸುವುದು ಏನನ್ನು ಹೇಳುತ್ತದೆ ಎಂಬುದನ್ನು ನಿರ್ದೇಶಕರೇ ಹೇಳಬೇಕು. ಹೆಚ್ಚಿನ ಧಾರಾವಾಹಿಯಲ್ಲಿ ನೀಚತನಕ್ಕೆ ಪ್ರಾಮುಖ್ಯ ನೀಡುತ್ತಿರುವುದು ಎದ್ದು ಕಾಣುತ್ತಿದೆ.

—ಪಟ್ನಂ ಅನಂತಪದ್ಮನಾಭ, ಮೈಸೂರು

## ನಟನೆಯ ಕನಸಿಗೊಂದು ಕಣ್ಣು

ಝೀ ಕನ್ನಡದಲ್ಲಿ ವಾರಂತ್ಯದಲ್ಲಿ ಪ್ರಸಾರವಾಗುವ 'ಮಹಾನಟಿ' ರಿಯಾಲಿಟಿ ಶೋ ಅಚ್ಚುಕಟ್ಟಾಗಿ ಮೂಡಿಬರುತ್ತಿದೆ. ಈವರೆಗೆ ಪ್ರಸಾರವಾದ ಕಾರ್ಯಕ್ರಮಗಳನ್ನು ನೋಡಿದಾಗ ಸ್ಪರ್ಧಿಗಳ ನಟನಾ ಕೌಶಲ ಮೆಚ್ಚುವಂತಿದೆ. ಯಾರೊಬ್ಬರೂ ತರಬೇತಿ ಪಡೆದು ಬಂದವರಲ್ಲ. ಅವರಲ್ಲಿನ ಪ್ರತಿಭೆಯನ್ನು ಗುರುತಿಸುವ ಕೆಲಸ ಈ ಶೋ ಮೂಲಕ ಆಗುತ್ತಿದೆ. ನಟಿಯರಾಗಬೇಕು ಎಂಬ ಕನಸು ಸಾಕಾರಗೊಳಿಸಲು ಇದು ಉತ್ತಮ ವೇದಿಕೆಯಾಗಿದೆ. ಈ ವೇದಿಕೆಯನ್ನು ಸ್ಪರ್ಧಿಗಳೂ ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಆಕಾಂಕ್ಷಿಗಳ ಆಸೆಗೆ ತಣ್ಣೀರು

'ಸಿರಿ ಕನ್ನಡ' ವಾಹಿನಿಯ 'ಗೃಹಲಕ್ಷ್ಮಿ'ಯಲ್ಲಿ 'ಮಹಾಲಕ್ಷ್ಮಿಯರಿಗೊಂದು ಸಿಹಿಸುದ್ದಿ' ಎಂದು ಪ್ರತಿ ದಿನ ಜಾಹೀರಾತು ತೋರಿಸುತ್ತಾರೆ. ಆ ಪ್ರಕಟಣೆಯಲ್ಲಿ ಕೊಡುವ ಫೋನ್ ನಂಬರ್‌ಗೆ ಕರೆ ಮಾಡಿದರೆ ಸ್ವಿಚ್ ಆಫ್ ಆಗಿದೆ ಅಂತ ಬರುತ್ತದೆ. ವಾಟ್ಸ್‌ಆ್ಯಪ್ ಸಂದೇಶ ಕಳಿಸಿದರೆ ಅದು ಮುಟ್ಟುವುದಿಲ್ಲ. ಶೋ ಎಂದು ಜಾಹೀರಾತು ಹಾಕಿ ಆಕಾಂಕ್ಷಿಗಳ ಆಸೆಗೆ ತಣ್ಣೀರು ಎರಚಿದ್ದಾರೆ. ಅದೂ ಬೆಂಗಳೂರಿಗೆ ಮಾತ್ರ ಸೀಮಿತ ಅನ್ನುವ ಷರತ್ತು ಬೇರೆ. ಹಳ್ಳಿಗಾಡಿನ ಹೆಣ್ಣುಮಕ್ಕಳು ಈ ಕಾರ್ಯಕ್ರಮದಿಂದ ವಂಚಿತರಾಗಬೇಕೆ?

—ಆರತಿ ರಾಜೇಂದ್ರ ಹೆಗಡೆ, ಹಾವೇರಿ

## ನಗೆಪಾಟಲಿನ 'ತೆನಾಲಿ'

ಕಲರ್ಸ್ ಕನ್ನಡ ವಾಹಿನಿಯಲ್ಲಿ 'ತೆನಾಲಿ ರಾಮ' ಎಂಬ ಹಾಸ್ಯಾಸ್ಪದ ಧಾರಾವಾಹಿ ಬರುತ್ತಿದೆ. ಮೊದಲಿಗೆ ಭಾಷೆ. ಪಾತ್ರಧಾರಿಗಳ ತುಟಿ ಸಂಚಲನಕ್ಕೂ ಮಾತಿಗೂ ತಾಳೆಯಾಗುವುದೇ ಇಲ್ಲ. ಇನ್ನು ಎಲ್ಲ ಪಾತ್ರಧಾರಿಗಳೂ ಕಾಮಿಡಿ ಪೀಸ್‌ಗಳಾಗಿದ್ದಾರೆಯೇ ಹೊರತು ನಾವು ಕೇಳಿದ ತೆನಾಲಿ ರಾಮನಲ್ಲ. ನಮ್ಮ ನರಸಿಂಹರಾಜು ಅವರ ಪಾತ್ರದ ಮುಂದೆ ಇದೊಂದು ನಗೆಪಾಟಲಿನಂತಿದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## 'ಥಟ್'ಗೆ ಕನ್ನಡ ಸೊಗಡು

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ಪ್ರತಿದಿನ ತಪ್ಪದೇ ನೋಡುತ್ತೇನೆ. ಮರುಪ್ರಸಾರ ನೋಡಿದರೂ ಬೇಸರ ಅನ್ನಿಸದಷ್ಟು ಹಿಡಿಸಿದೆ. ಇದಕ್ಕೆ ಈಗ ಮತ್ತೊಂದು ಸಂತೋಷವೂ ಸೇರ್ಪಡೆಯಾಗಿದೆ. ಪ್ರತಿ ಶುಕ್ರವಾರದ ಕಂತು ಕನ್ನಡಕ್ಕಾಗಿಯೇ ಮೀಸಲಾಗಿದೆ. ಕನ್ನಡ ನೆಲ ಮತ್ತು ಭಾಷೆಗೆ ಸಂಬಂಧಿಸಿದಂತೆ ರೂಪಿಸುತ್ತಿರುವ ಕಾರ್ಯಕ್ರಮ ಮತ್ತಷ್ಟು ಬೆಳೆಯಲಿ.

—ಕೆ.ಎಸ್. ಪ್ರಭಾಕರ ಗುಪ್ತ

## ಸೀತಾರಾಮ: ಬೇಡ ಪ್ರತಿಷ್ಠೆ

ಝೀ ಕನ್ನಡದ 'ಸೀತಾರಾಮ' ಧಾರಾವಾಹಿಯಲ್ಲಿ ಶ್ರೀರಾಮ ತನ್ನ ಆಸ್ತಿ ಅಂತಸ್ತು ಎಲ್ಲವನ್ನು ಬದಿಗಿಟ್ಟು, ನೇರ ನಡೆಯ ದಿಟ್ಟಗುಣದ ಸೀತೆಯನ್ನು ಮದುವೆಯಾಗಲು ಯತ್ನಿಸುತ್ತಾನೆ. ಸಿಹಿಯನ್ನು ಮಗಳಾಗಿ ಮನಪೂರ್ವಕವಾಗಿ ಒಪ್ಪಿಕೊಂಡಿದ್ದಾನೆ. ಅದಕ್ಕೆ ಸೀತಾ ಸಹಮತ ಸೂಚಿಸುವುದಿಲ್ಲ. ಇಲ್ಲಿ ಮುಖ್ಯವಾದ ಬದಲಾವಣೆ ಆಗಬೇಕಿದೆ ಎಂದು ನಮಗೆ ಅನಿಸಿದೆ. ಭಾರ್ಗವಿಯ ಕುತಂತ್ರಗಳಿಗೆ ಪ್ರತಿತಂತ್ರಗಳನ್ನು ಸೃಷ್ಟಿಸಿ ದೇಸಾಯಿ ಮನೆತನದ ಗೌರವವನ್ನು ಎತ್ತಿಹಿಡಿಯಬೇಕೆ ಹೊರತು ಸ್ವಪ್ರತಿಷ್ಠೆ ಮೆರೆಯಬಾರದು.

—ವಿಜಯಾ ನಂ., ಬೆಂಗಳೂರು

## ಹಾಸ್ಯ ಧಾರಾವಾಹಿ ಮತ್ತೆ ಬರಲಿ

ಈ ಮೊದಲು ಕಿರುತೆರೆಯಲ್ಲಿ ಹಲವು ಹಾಸ್ಯ ಧಾರಾವಾಹಿಗಳು ಬರುತ್ತಿದ್ದವು. ಕ್ರಮೇಣ ಅವುಗಳ ಪ್ರಮಾಣ ಕಡಿಮೆ ಆಗುತ್ತಾ ಬಂತು. 'ಪಾಪ ಪಾಂಡು', 'ಸಿಲ್ಲಿ ಲಲ್ಲಿ' ವೀಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತಿದ್ದವು. ಅವೂ ಈಗ ನಿಂತಿವೆ. ನಿತ್ಯದ ಧಾರಾವಾಹಿಗಳ ಮಧ್ಯದಲ್ಲಿ ಒಂದೊಂದು ಹಾಸ್ಯ ಕಥೆ ಇದ್ದಿದ್ದು ಖುಷಿ ಕೊಡುತ್ತಿತ್ತು. ಇಂತಹ ಧಾರಾವಾಹಿಗಳು ಮತ್ತೆ ಬರುವಂತೆ ಆಗಬೇಕು.

—ಎಸ್. ನರೇಂದ್ರ ನಾಯಕ್, ಗಂಗೊಳ್ಳಿ